ಪ್ರಾಸಾ-3 ರವರನ್ನು ಪುನಃ ಕರೆಸಿ
ಪ್ರಮಾಣ ವಚನ ಬೋಧಿಸಲಾಯಿತು.
ದಿನಾಂಕಃ 20.06.2017

ಮುಂದುವರೆದ ಪಾಟೀಸವಾಲುಃ 1ನೇ ಆರೋಪಿ ಪರವಾಗಿ ಶ್ರೀ ಎ.ಎಚ್.ಬಿ. ವಕೀಲರಿಂದಃ

ಪೊಲೀಸರು ನನಗೆ ಬರವಣಿಗೆಯಲ್ಲಿ ಸಾಕ್ಷಿಯಾಗಿ ಬರಲು ನೋಟೀಸು ಕೊಟ್ಟಿರಲಿಲ್ಲ. ನಮ್ಮ ಮನೆ ಎನ್.ಎಸ್.ಮೆಡಿಕಲ್ಸ್‌ಗೆ ಸುಮಾರು ಕಾಲು ಕಿ.ಮಿ. ದೂರದಲ್ಲಿದೆ. ಎನ್.ಎಸ್.ಮೆಡಿಕಲ್ಸ್ ಸುತ್ತ ಮುತ್ತ ಸಾಕಷ್ಟು ವ್ಯಾಪಾರಿ ಮಳಿಗೆಗಳಿದ್ದು, ಸಕಲೇಶಪುರ ಮುಖ್ಯರಸ್ತೆಗೆ ಹೊಂದಿಕೊಂಡಿದೆ. ನಾನು ನಮ್ಮ ಆಫೀಸ್‌ನಿಂದ ಎನ್‌ಎಸ್. ಮೆಡಿಕಲ್ಸ್‌ಗೆ ಹೋದೆ. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಎನ್.ಎಸ್.ಮೆಡಿಕಲ್ಸ್ ಉದ್ದಗಲ ಹೇಳಲು ಬರಲ್ಲ. ಕ್ಯಾಷ್ ಡ್ರಾವರ್ ಸದರಿ ಮಳಿಗೆಯ ಯಾವ ದಿಕ್ಕಿನಲ್ಲಿ ಇತ್ತು ಎಂದು ಹೇಳಲು ಬರಲ್ಲ. ಮಹಜರನ್ನು ಎನ್.ಎಸ್.ಮೆಡಿಕಲ್ಸ್‌ನಲ್ಲಿ ಬರೆದರು. ಅದನ್ನು ಬೆಳಿಗ್ಗೆ 10ಗಂಟೆಗೆ ಬರೆದಿದ್ದಾರೆ. ಲೆಟರ್‌ಹೆಡ್ ಬಿಳಿ ಮತ್ತು ಕೆಂಪು ಬಣ್ಣದ್ದಾಗಿತ್ತು. ಅದರಲ್ಲಿ ಶಶಿಧರ್‌ರವರ ರಿಜಿಸ್ಟ್ರೇಷನ್ ನಂಬರ್ ಇದ್ದದ್ದನ್ನು ನೋಡಿಲ್ಲ. ಪ್ರಿಂಟರ್ ಟಿವಿಎಸ್ ಕಂಪನಿಯದ್ದಾಗಿತ್ತು.

ನನ್ನ ಸಮ್ಮುಖದಲ್ಲಿ ಎನ್.ಎಸ್.ಮೆಡಿಕಲ್ಸ್‌ನಲ್ಲಿ ಯಾವುದೇ ಮಹಜರ್ ಬರೆದಿಲ್ಲ ಮತ್ತು ಅಂತಹ ಮಹಜರ್‌ನಡಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂಬುದು ಸರಿಯಲ್ಲ.

ವಿ.ಆರ್.ಎಲ್. ಆಫೀಸಿನಲ್ಲಿ ವಶಪಡಿಸಿಕೊಂಡ ರಶೀದಿ ಯಾರ ಹೆಸರನಲ್ಲಿ ಇತ್ತು ಎಂಬುದನ್ನು ನೋಡಲಿಲ್ಲ. ಎಷ್ಟು ರಶೀದಿಗಳಿದ್ದವು ಎಂಬುದನ್ನು ಹೇಳಲಾರೆ. ಇಂಜೆಕ್ಷನ್‌ಗಳನ್ನು ಡಾಕ್ಟರ್ ಹೆಸರಿನಲ್ಲಿ ತರಿಸಿಕೊಂಡ ರಶೀದಿ ಅಂತ ಹೇಳಿದರು. ಸಾಯಿ ಕೊರಿಯರ್‌ನಲ್ಲಿ ವಶಪಡಿಸಿಕೊಂಡ ರಶೀದಿ ಯಾರ ಹೆಸರಿನಲ್ಲಿತ್ತು ಮತ್ತು ಎಷ್ಟು ರಶೀದಿಗಳಿದ್ದವು ಎಂಬುದು ಗೊತ್ತಿಲ್ಲ. ನನ್ನ ಸಮ್ಮುಖ ವಿ.ಆರ್.ಎಲ್ ಆಫೀಸಿನಲ್ಲಿ ಮತ್ತು ಸಾಯಿ ಕೊರಿಯರ್ಸ್‌ನಲ್ಲಿ ಯಾವುದೇ ರಶೀದಿಗಳನ್ನು ವಶಪಡಿಸಿಕೊಂಡಿಲ್ಲ ಎಂಬುದು ಸರಿಯಲ್ಲ.

13-14 ವರ್ಷಗಳಿಂದ ನಾನು ಮರವ್ಯಾಪಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ಮರವ್ಯಾಪಾರದಲ್ಲಿ ಪೊಲೀಸರ ಜೊತೆ ಬಾಂಧವ್ಯ ಇರುತ್ತೆ ಎಂಬುದು ಸರಿಯಲ್ಲ. ನಾನು

ಇದೇ ಕೇಸಿನಲ್ಲಿ ಮೊದಲನೆಯದಾಗಿ ಸಾಕ್ಷಿ ಹೇಳಿದ್ದೇನೆ. ಇದಲ್ಲದೆ ಬೇರೆ ಕೇಸುಗಳಲ್ಲಿ ಯಾವುದೇ ಸಹಿ ಮಾಡಿಲ್ಲ. ಆ ಮಹಜರ್‌ಗಳಲ್ಲಿ ಏನು ಬರೆಯಲಾಗಿತ್ತು ಎಂಬುದನ್ನು ತಿಳಿದುಕೊಂಡಿದ್ದೇನೆ. ನಾನು ನಿಪಿ-9 ರಿಂದ 11ರ ಮಹಜರ್‌ಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂಬುದು ಸರಿಯಲ್ಲ. ಪೊಲೀಸರ ಜೊತೆ ನನ್ನ ವ್ಯಾಪಾರಕ್ಕೆ ಸಂಬಂಧ ಚೆನ್ನಾಗಿರಲಿ ಎಂದು ನಾನು ಅವರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಬುದು ಸರಿಯಲ್ಲ. 1ನೇ ಆರೋಪಿ ನಮ್ಮನ್ನು ನಾನು ಹೇಳಿದ ಯಾವುದೇ ಸ್ಥಳಗಳಿಗೆ ಕರೆದುಕೊಂಡು ಹೋಗಿಲ್ಲ ಎಂಬುದು ಸರಿಯಲ್ಲ.

ಪಾಟೀಸವಾಲುಃ 2ನೇ ಆರೋಪಿ ಪರವಾಗಿ ಶ್ರೀ ಜೆ.ಎಸ್ ವಕೀಲರಿಂದಃ

ಇರುವುದಿಲ್ಲ ಎಂದು ಮಂಡಿಸುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಅವರು ಹೇಳಿದಂತೆ ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ
ಸ್ಪೆಷಲ್ ನ್ಯಾಯಾಧೀಶರು, ಹಾಸನ.